## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:–** ಜಿಲ್ಲಾ/ತಾಲ್ಲೂಕು ಪಂಚಾಯತ್ ಲೆಕ್ಕಗಳ ಗಣಕೀಕರಣ ಯೋಜನೆಯ Help Desk Servicesಗೆ ಪ್ರತ್ಯೇಕ ದೂರವಾಣಿ ಸಂಪರ್ಕ ಪಡೆಯುವ ಕುರಿತು.

**ಓದಲಾಗಿದೆ:–**1) ಗ್ರಾಅಪ 8 ಎಎಫ್ಎನ್ (2) 2008, ದಿನಾಂಕ:25.06.2009.
2) ಗ್ರಾಅಪ 4(3) ಎಎಫ್ಎನ್ 2011, ದಿನಾಂಕ:19.04.2011.
3) ಗ್ರಾಅಪ 4(3) ಎಎಫ್ಎನ್ 2011, ದಿನಾಂಕ:26.09.2011.
4) ಗ್ರಾಅಪ 24 ಗಣಕಕೋಶ 2012, ದಿನಾಂಕ:27.12.2012.

****

**ಪ್ರಸ್ತಾವನೆ:–**

ಜಿಲ್ಲಾ ಪಂಚಾಯತ್ ಗಳ ಲೆಕ್ಕಗಳ ಗಣಕೀಕರಣವನ್ನು ಖಜಾನಾ ಕಾರ್ಯಕ್ರಮದ ವಿಸ್ತರಣೆಗಾಗಿ ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ಆಇ 183 ಆಖಇ 2003, ದಿನಾಂಕ:24.07.2003ರನ್ನು ಹೊರಡಿಸಲಾಗಿದೆ. ಕರ್ನಾಟಕ ಪಾರದರ್ಶಕತೆ ಅಧಿನಿಯಮ 1999 4(ಸಿ) ಅನ್ವಯ ಈ ಕಾರ್ಯವನ್ನು ಸರ್ಕಾರದ ಆದೇಶ ಸಂಖ್ಯೆ: ಆಇ 183 ಆಖಇ 2003, ದಿನಾಂಕ:18.10.2003ರ ಆದೇಶದಲ್ಲಿ ಮೆ:ಸಿಎಂಸಿ ಗೆ ವಹಿಸಲಾಗಿದ್ದು ದಿನಾಂಕ:01.07.2013ರಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧೀನಕ್ಕೆ ವಹಿಸಿಕೊಳ್ಳಲಾಗಿದೆ. ಜಿಲ್ಲಾ ಪಂಚಾಯತಿಗಳಿಗೆ ನೀಡುವ Help Desk ಸೇವೆಗೆ ಅಗತ್ಯವಿರುವ ದೂರವಾಣಿ ಸಂಪರ್ಕ ಪಡೆಯುವ ಕುರಿತು ಹಾಗೂ ಸದರಿ ದೂರವಾಣಿಯ ಬಿಲ್ಲನ್ನು ಜಿಲ್ಲಾ/ತಾಲ್ಲೂಕು ಪಂಚಾಯತ್ ಲೆಕ್ಕಗಳ ಗಣಕೀಕರಣ ಯೋಜನೆಯ ಲೆಕ್ಕ ಶೀರ್ಷಿಕೆ: 2515-00-101-0-24-059(ಯೋಜನೆ) ಅಡಿಯಲ್ಲಿ ಭರಿಸುವ ಕುರಿತು ಈ ಆದೇಶ.

**ಸರ್ಕಾರದ ಆದೇಶ ಸಂ.ಗ್ರಾಅಪ327ಎಎಫ್ಎನ್2013 ಬೆಂಗಳೂರು, ದಿನಾಂಕ:06-03-2014**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಜಿಲ್ಲಾ ಪಂಚಾಯತಿಗಳ ಲೆಕ್ಕಗಳ ಗಣಕೀಕರಣ ಕಾರ್ಯದಲ್ಲಿ ಜಿಲ್ಲಾ ಪಂಚಾಯತಿಗಳಿಗೆ ಬೇಕಾಗುವ ತಾಂತ್ರಿಕ ನೆರವು ಕುರಿತು Help Desk ಸೇವೆಗೆ ಅಗತ್ಯವಿರುವ ದೂರವಾಣಿ ಸಂಪರ್ಕ ಪಡೆಯಲಾಗಿದ್ದು, ಅದರ ಪ್ರತಿ ಮಾಹೆಯ ಬಿಲ್‌ನ ಮೊತ್ತವನ್ನು ಜಿಲ್ಲಾ/ತಾಲ್ಲೂಕು ಪಂಚಾಯತ್ ಲೆಕ್ಕಗಳ ಗಣಕೀಕರಣ ಯೋಜನೆಯ ಲೆಕ್ಕ ಶೀರ್ಷಿಕೆ: 2515-00-101-0-24-059(ಯೋಜನೆ) ಅಡಿಯಲ್ಲಿ ಭರಿಸಲು ಮಂಜೂರಾತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಶ್ರೀಕೃಷ್ಣ ಎನ್. ಬುಗಟ್ಯಾಗೋಳ)
ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿಗಳು:

1. ಮಹಾಲೇಖಾಪಾಲರು, (ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಮಹಾಲೇಖಾಪಾಲರು, (ಸಿ ಮತ್ತು ಸಿಎ) ಕರ್ನಾಟಕ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಗಳು, (ಆಯವ್ಯಯ ಮತ್ತು ಸಂಪನ್ಮೂಲ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಕಂಟ್ರೋಲರ್, (ಅಕೌಂಟ್ಸ್ ಮ್ಯಾನೇಜ್‌ಮೆಂಟ್) ಆರ್ಥಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
6. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
7. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು.
8. ಉಪ ನಿರ್ದೇಶಕರು (ಟಿ.ಎನ್.ಎಂ.ಸಿ.) ಖನಿಜ ಭವನ, ಬೆಂಗಳೂರು.
9. ಉಪ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
10. ಪ್ರಧಾನ ಸಂಪಾದಕರು, ಕರ್ನಾಟಕ ವಿಕಾಸ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
11. ವಿಶೇಷಾಧಿಕಾರಿ, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.